Doc-157 T-P-2

Regd. No BG 155 20-9-1969

SATYAVADI

Daily

MYSORE 4

53 rd Year of Publication

ಸತ್ಯವಾದಿ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ
ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತನ್ನು ಪ್ರಕಟಿಸಿ
ಸ್ಥಳದಲ್ಲಿ ತಿಂಗಳಿಗೆ ಚಂದಾ 40 ಪೈಸೆ
ಅಂಚೇವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ಸ್ಥಾಪಕರು: ಅರಮನೆ ಏರಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಭಾರತ ಹೋಟೆಲುಗಳ ಕುರಿತು ಟೀಕೆ

ಚಂಡೀಸ್ಥರ

ನವದೆಹಲಿ— ಚಂಡಿಘರ ಸಮಸ್ಯೆ ಬ ತಾವೂ ಮತ್ತು ಪ್ರಧಾನಿಯವರೂ ನಡೆಸಿ ದ ವಿಷಯವನ್ನು ತಾ॥ 23 ರಂದು ಅಕಾ ಲಿ ದಳದ ಕಾರ್ಯಕಾರಿ ಸಮಿತಿಯಲ್ಲಿ ಪರ್ಯಾ ಲೋಚಿಸಲಾಗುವುದೆಂದು ಸಂತ ಫಾ ತೇ ಸಿಂಗ್ ಹೇಳಿದರು.

"ಸತ್ಯವಾದಿ" ಯ ಸ್ವರ್ಣೋತ್ಸವ

28-9-1969 ಭಾನುವಾರ
ಬೆಳಿಗ್ಗೆ 10 ಗಂಟೆಗೆ
ಮೈಸೂರು 4, ಚಾಮರಾಜಪುರಂನಲ್ಲಿನ
'ಸತ್ಯವಾದಿ' ಆಫೀಸಿನಲ್ಲಿ

ರಾಷ್ಟ್ರಾಧ್ಯಕ್ಷರು, ಪ್ರಧಾನಿಯವರು, ಶ್ರೀಮನ್ಮಹಾರಾಜರು, ಮತ್ತಿತರ ಗಣ್ಯರು ಅಭಿನಂದಿಸಿ ಶುಭ ಕೋರಿರುವರು. ಶ್ರೀ ಶೃಂಗೇರಿ ಮತ್ತು ಶ್ರೀ ದ್ವಾರಕಾ ಜಗದ್ಗುರುಗಳವರು ಶುಭಾಶೀರ್ವಾದ ಮತ್ತು ಧನ ನೆರವು ಅನುಗ್ರಹಿಸಿರುವರು.

ರಾಜಸಭಾಭೂಷಣ ಶ್ರೀ ಎಫ್. ಕೆ ಇರಾನಿಯವರು, ಶ್ರೀ ಮಾಧವ್ ಶಿನ್ಯಾ ವರರು, ಶ್ರೀ ಎಂ. ಬಿ. ಬಸವಯ್ಯನವರು, ಆಸೆರಾ ಟಾಕೀಸಿನವರು, ಪದ್ಮಭೂಷಣ ನೇತ್ರದಾನಿ ಡಾ॥ ಎಂ.ಸಿ. ಮೋದಿಯವರು ಡಾ॥ ಆರ್. ಎಸ್. ನಂಜುಂಡಸ್ವಾಮಿ (ಗ್ಲಾಸ್ಕೊ) ಶಾಸ್ತ್ರಧರ್ಮನಿರತ ಶ್ರೀ ಅನಂತ ನರಸಿಂಹಯ್ಯಂಗಾರ್ (ಹೊಂಗನೂರು) ರವರೂ ಶುಭಾಶಯದೊಡನೆ ನೆರವು ನೀಡಿ ರುವರು.

ಪತ್ರಿಕೆಗಳ ಸ್ವರ್ಣೋತ್ಸವವು ಅತಿ ವಿರಳ ಮತ್ತು ಮೈಸೂರು ರಾಜ್ಯದಲ್ಲಿ ನಡೆದಂತೆ ಯೇ ಇಲ್ಲ.

ಸ್ವರ್ಣೋತ್ಸವದ ಪೂರ್ಣ ಯಶಸ್ಸಿಗೆ ಶುಭ ಸಂದೇಶಗಳನ್ನೂ, ಧನನೆರವನ್ನೂ ಆದರ ವಿಶ್ವಾಸಗಳಿಂದ ನೀತಿ ಸಹಕರಿಸ ಬೇಕಾಗಿ ವಿನಂತಿಸಿ, ಈಡೇರುವದೆಂದು ಕೃತಜ್ಞತಾಪೂರ್ವಕ ವಂದಿಸುತ್ತೇವೆ.

ಭಾರತದ ಹೋಟಲುಗಳ ಬಗ್ಗೆ ಟೀಕೆ

ಮದರಾಸು — "ಭಾರತದ ಹೋಟಲುಗಳು ಭಾರತೀಯವಾಗಿರುವ ಬದಲು ಹೆಚ್ಚಾಗಿ ಪಾಶ್ಚಾತ್ಯಗಳಾಗುತ್ತಿವೆ-" ಎಂದು ಜರ್ಮನ್ ಹೋಟಲು ಆಡಳಿತ ನಿಪುಣ ಪ್ರೊ॥ ರಾಕ್‌ಫಾಲ್ ಹೇಳಿದರು— ಭಾರತದ ಹೋಟಲುಗಳಲ್ಲಿ— ನಾನು ಭಾರತೀಯ ಸಂಪ್ರದಾಯ ಮತ್ತು ಘನತೆ ಕಾಣಲಿಲ್ಲ ನೆಂದೂ, ನಾವು ಪ್ರವಾಸಿಕರು ಭಾರತೀಯ ರೀತಿಯನ್ನು ನೋಡಲು ಇಚ್ಚಿಸುವೆವೇ ಹೊರತು ಪಾಶ್ಚಾತ್ಯ ರೀತಿಯನ್ನಲ್ಲವೆಂದೂ ಹೇಳಿದರು.

★

ಕಲಾವಿದರಿಗೆ ಸನ್ಮಾನ

ಮೈಸೂರು— ಪೌರಸಭೆಯವರು ಪದ್ಮಶ್ರೀ ಪ್ರಶಸ್ತಿ ಪಡೆದ ಸುಪ್ರಸಿದ್ಧ ಕಲಾವಿದರಾದ ಶ್ರೀ ಎಸ್ ಎ ಸ್ವಾಮಿಯವರನ್ನು ಪೌರಾಡಳಿತ ಮಂತ್ರಿ ಶ್ರೀ ಬಿ ಎಂ ಪಾಟೀಲರವರ ಅಧ್ಯಕ್ಷತೆಯಲ್ಲಿ ಗುರುವಾರ ಸನ್ಮಾನಿಸಿದರು.

★

ರಾಂರವರು ಮಂತ್ರಿಮಂಡಲ ಬಿಡಲಿ

ಅಲಹಾಬಾದು— 10 ವರ್ಷದಿಂದ ತನ್ನ ಆದಾಯ ತೆರಿಗೆ ಪಟ್ಟಿ ಕೊಡದಿರುವ ಆಹಾರ ಮಂತ್ರಿ ಜಗಜೀವನರಾಂರನ್ನು ಮಂತ್ರಿಮಂಡಲದಿಂದ ತೆಗೆದುಹಾಕಿದಿದ್ದರೆ ಎಸ್ಸೆಸ್ಪಿ ಮುಂದಿನ ಪಾರ್ಲಿಮೆಂಟು ಅಧಿವೇಶನದಲ್ಲಿ ಮಂತ್ರಿಮಂಡಲದ ವಿರುದ್ಧ ಅವಿಶ್ವಾಸ ಸೂಚನೆ ತರುವದೆಂದು ಜನೇಶ್ವರ ಮಿಶ್ರ ಹೇಳಿರುವರು.

★

ಚಿತ್ರನಿರ್ಮಾಪಕರಿಗೆ ಸತ್ಕಾರ

ಮೈಸೂರು— ಚಲಚ್ಚಿತ್ರ ಪತ್ರಿಕೋದ್ಯೋಗಿ ಸಂಘದವರು ಗುರುವಾರ ಸುಪ್ರಸಿದ್ಧ ಕಾದಂಬರಿಕಾರರೂ, ಚಲಚ್ಚಿತ್ರ ನಿರ್ಮಾಪಕರೂ ಆದ 'ಚದುರಂಗ" ರನ್ನು ಸತ್ಕರಿಸಿದರು.

ಮೈಸೂರು: ಲ್ಯಾನ್ಸ್‌ಡೌನ್ ಬಿಲ್ಡಿಂಗ್ ಎದುರು ನಿರ್ಮಿಸಿರುವ ಶ್ರೀ ಎಂ. ವೆಂಕಟ ಕೃಷ್ಣಯ್ಯನವರ 8 ಅಡಿಗಳ ಎತ್ತರದ ಅಮೃತಶಿಲೆಯ ಪ್ರತಿಮೆಯನ್ನು ನಿನ್ನೆ ರಾಷ್ಟ್ರಾಧ್ಯಕ್ಷ ಶ್ರೀ ವಿ.ವಿ. ಗಿರಿಯವರು ಅನಾವರಣ ಮಾಡಿ, ಅವರ ಜೀವಿತದ ವಿವಿಧ ವಿಚಾರಗಳನ್ನೆತ್ತಿ ಮುಕ್ತಕಂಠದಿಂದ ಪ್ರಶಂಸಿಸಿದರು.

ಮೈಸೂರಿನಲ್ಲಿ ಶ್ರೀಮಾ ವೆಂಕಟ ಕೃಷ್ಣಯ್ಯನವರಂಥಹ ಜನಪ್ರಿಯರಾದ ಮಹಾವ್ಯಕ್ತಿ ಬೇರೊಬ್ಬರಿಲ್ಲ. ಎಂದೆಂದಿಗೂ ಅವರು ಸ್ಮರಣೆಯಲ್ಲಿರುವಂಥವರು. ಶಿಕ್ಷಣ ಸಾಮರ್ಥ್ಯರು, ಪತ್ರಿಕೋದ್ಯಮ ರಾಜಕೀಯ, ಸಮಾಜಾಭಿವೃದ್ಧಿ ಈ ವಿಷಯಗಳಲ್ಲಿ ಅವರ ಆಯಸ್ಸನ್ನು ಪೂರ್ಣ ಸವೆಸಿ ದೇಶದ ಜನತೆಯ ಕಲ್ಯಾಣಕ್ಕಾಗಿ ಹೋರಾಡಿದ ಕೀರ್ತಿವಂತರು. ಮರಿಮಲ್ಲಪ್ಪ ಹೈಸ್ಕೂಲ್ ಹೆಡ್ಮಾಸ್ಟರ್, ಅನ್ನಾಥಾಲಯ ಸ್ಥಾಪಕರು, ಸಿವಿಕ್ ಸೋಷಿಯಲ್ ಅಸೋಸಿಯೇಷ್ ಮುಂತಾದ ಸಂಸ್ಥೆಗಳಸ್ಥಾಪಕರು ಅವರು. ತಾತಯ್ಯ ವೃದ್ಧ ಪಿತಾಮಹ, ದಯಾಸಾಗರ ಎಂದು ಅವರು ಕರೆಯಲ್ಪಟ್ಟಿರುವರು. ಇತರರ ಸಹಾಯಕ್ಕಾಗಿ ಅವರು ತನುಮನ ಧನವನ್ನೇ ಅರ್ಪಣೆ ಮಾಡುತ್ತಿದ್ದರು. ಸರಳ ಸ್ವಭಾವದವರಾದ ಅವರು ಜನರ ವಿಷಯದಲ್ಲಿ ತುಂಬಾ ದಯಾಪರರಾಗಿದ್ದರು.

ಚುನಾವಣೆಗಳಲ್ಲಿ ಅವರು ಹಸುವನ್ನು ಗುರುತಾಗಿ ಹೊಂದುತ್ತಿದ್ದರು.

○

ರಷ್ಯಾದ ಹೆಚ್ಚು ನೆರವು

ರಾವಲ್ಪಿಂಡಿ— ರಷ್ಯಾ 1966 ರಲ್ಲಿ ಪಾಕಿಸ್ಥಾನಕ್ಕೆ ಕೊಡಲೊಪ್ಪಿದ ರೂ 63 ಕೋಟಿ ಜೊತೆಗೆ ಮತ್ತೆ ರೂ 15 ಕೋಟಿ ಕೊಡಲೊಪ್ಪಿದೆ.

○ಗಡಿನಾಡು ಗಾಂಧಿ ಖಾನ್ ಅಬ್ದುಲ್ ಗಫಾರ್ ಖಾನ್ ಮುಂದಿನ ತಿಂಗಳು 1 ನೇ ತಾ॥ ದೆಹಲಿಗೆ ಬರುವರು.

ಎಜಿಓ

ಬೆಂಗಳೂರು— ಎಜಿಓ ಸಂಘದ ಕಾರ್ಯಕಾರಿ ಸಮಿತಿಯವರು ತಾ॥ 22 ರಂದು ಮುಖ್ಯ ಮಂತ್ರಿಗಳ ನಿವಾಸಕ್ಕೆ ಸಾಮೂಹಕ ಮೆರವಣಿಗೆಯಲ್ಲಿ ಹೋಗಿ ಅವರಿಗೆ ಮನವಿಪತ್ರ ಅರ್ಪಿಸಲು ನಿರ್ಧರಿಸಿರುವರು.

★

ರಷ್ಯಾಕ್ಕೆ ತಿಳುವಳಿಕೆ ಕೊಚಲಾಗಿದೆ

ನವದೆಹಲಿ— ಭಾರತದ ಕೆಲವು ಭಾಗಗಳನ್ನು ಚೀನಾದ್ದೆಂದು ತೋರಿಸುವ ರಷ್ಯಾ ಭೂಪಠಗಳನ್ನು ಸರಿಪಡಿಸಲು ರಷ್ಯಾಕ್ಕೆ ತಿಳಿಸಲಾಗಿದೆ.

○

ಶ್ರೀ ಗಿರಿಯವರ ವಿರುದ್ಧ ಅರ್ಜಿ

ನವದೆಹಲಿ— ಶ್ರೀ ಗಿರಿಯವರು ಅಧ್ಯಕ್ಷರಾ ಚುನಾಯಿಸಲ್ಪಟ್ಟಿರುವದನ್ನು ವಿರೋಧಿಸಿ ಸುಪ್ರೀಂ ಕೋರ್ಟಿನಲ್ಲಿ ಪಾರ್ಲಿಮೆಂಟಿನ 13 ಕಾಂಗ್ರೆಸಿಗರು ಒಂದು ಅರ್ಜಿಯನ್ನೂ, 18 ಮಂದಿ ಕಮ್ಯೂನಿಸ್ಟೇತರ ಎಂಪಿ ಮತ್ತು ಎಂಎಲ್ಎ ಗಳು ಮತ್ತೊಂದು ಅರ್ಜಿಯನ್ನೂ ಹಾಕಿರುವರು — ಅಂದರೆ ಇಲ್ಲೀವರೆಗೆ ವಿರೋಧ ಅರ್ಜಿಗಳು ಬಿದ್ದಿವೆ.

★

ನೇರ ಚುನಾವಣೆ

ವಾಷಿಂಗ್ಟನ್— 1972 ರಲ್ಲಿ ಅಮೇರಿಕಾ ಅಧ್ಯಕ್ಷತೆಗೆ ನೇರ ಚುನಾವಣೆ ನಡೆಯಬಹುದೆಂದು ಹೇಳಲಾಗಿದೆ — ತೊಡಕಿನ ಎಲೆಕ್ಟೋರಿಯಲ್ ಪದ್ಧತಿ ತ್ಯಜಿಸಲಾಗುವುದು.

○

ಅಗ್ನಿಸ್ಪರ್ಶ, ಲೂಟಿ

ಅಹಮದಾಬಾದು— ಜನತೆಯ ಎರಡು ಗುಂಪುಗಳಲ್ಲಿ ಹೊಡೆದಾಟ, ಅಗ್ನಿಸ್ಪರ್ಶ, ಲೂಟಿ ನಡೆದು 11 ಮಂದಿ ಗಾಯ ಗಾಯಗೊಂಡರು.

(2)

ತೆಲಂಗಾಣಾ ಮತ್ತು ಚಂಡಿಘರ್

ನವದೆಹಲಿ— ತೆಲಂಗಾಣಾ ವಿಷಯ ಚರ್ಚಿಸಲು ಪ್ರಧಾನಿ ಇಂದಿರಾರವರು ಆಂಧ್ರ ಮುಖ್ಯಮಂತ್ರಿ ಬ್ರಹ್ಮಾನಂದ ರೆಡ್ಡಿಯವರನ್ನು ಡೆಲ್ಲಿಗೆ ಕರೆದಿರುವುದಾಗಿ ಗೊತ್ತಾಗಿದೆ — ಕೇಂದ್ರ ರಾಜ್ಯವಾಗಿರುವ ಮತ್ತು ಪಂಜಾಬು — ಹರಿಯಾಣಾ ರಾಜ್ಯಗಳು ಹಕ್ಕು ಒಡ್ಡುತ್ತಿರುವ ಚಂಡೀಘರಿನ ಭವಿಷ್ಯ ಬಗ್ಗೆ ಈ ಸಂಜೆ ಇಲ್ಲಿ ಪ್ರಧಾನಿಯವರು ಸಂತ್ ಫತೇಸಿಂಗ್‌ರೊಡನೆ ಮಾತುಕತೆ ನಡೆಸುವರು — ಆ ಎರಡು ರಾಜ್ಯಗಳ ಮುಖ್ಯಮಂತ್ರಿಗಳು ಈ ಬಗ್ಗೆ ಈ ರಾಜ್ಯದ ರಾಜಧಾನಿಯಲ್ಲಿ ಚರ್ಚಿಸುವರೆಂದು ಹೇಳಲಾಗಿದೆ.

ವೇಶ್ಯಾಗೃಹ ರಾಜ

ಕಲ್ಕತ್ತಾ— ವೇಶ್ಯಾಗೃಹ ನಡೆಸುತ್ತಿದ್ದ (ಪ್ರಾಯಶಃ ದೇಶದಲ್ಲೇ ಅತಿ ಧನವಂತ ವೇಶ್ಯಾಗೃಹ ಮಾಲೀಕ) ಮತ್ತು ಹಲವು ವರ್ಷಗಳಿಂದ ದಿನಕ್ಕೆ ರೂ 3000 ಸಂಪಾದಿಸುತ್ತಿದ್ದ ಒಬ್ಬನನ್ನು ಕಲ್ಕತ್ತಾ ಪತ್ತೇದಾರಿ ಪೋಲೀಸರು ಬಂಧಿಸಿದರು : ಆತನು ಕೋರ್ಟಿನಲ್ಲಿ ಹಾಜರ್ಪಡಿಸಲ್ಪಟ್ಟಾಗ ಅವನ ಪರ 17 ಲಾಯರುಗಳು ಹಾಜರಾಗಿದ್ದರು : ಈತನ ದಸ್ತಗಿರಿಯನ್ನು ಪ್ರಭಾವಶಾಲಿ ವ್ಯಕ್ತಿಗಳು ವಿರೋಧಿಸಿದರು : ಈತನಿಗೆ ಮೂರು ಭಾರಿ ನಿವಾಸಗಳಿವೆ : ಕೆಂಪುದೀಪ ಜಿಲ್ಲೆಗಳಲ್ಲಿ 11 ನಿವಾಸಗಳನ್ನು ಭೋಗ್ಯಕ್ಕೆ ಪಡೆದಿದ್ದಾನೆ : ರೂಂಗಳನ್ನು ವೇಶ್ಯೆಯರಿಗೆ ಬಾಡಿಗೆ ಕೊಟ್ಟದ್ದು, ದೇಶಾದ್ಯಂತ ಹುಡುಗಿಯನ್ನು ದೊರಕಿಸಲು ಏಜೆಂಟರುಗಳನ್ನು ಹೊಂದಿದ್ದನೆಂದೂ, ತನ್ನ ಸಹೋದರರ ಹೆಸರಿನಲ್ಲಿ ದೊಡ್ಡ ಕೆಮಿಸ್ಟ್ ಅಂಗಡಿ, ದೊಡ್ಡ ಹೋಟಲು, ಶೃಂಗಾರದ ಅಂಗಡಿ ಹೊಂದಿದ್ದಾನೆ : ಭಾರಿ ಆದಾಯ ತೆರಿಗೆ, ಕ್ಲೋಡ್ಡೆ ತಪ್ಪಿಸಿಕೊಂಡಿದ್ದಾನೆ ; ಆದಾಯ ತೆರಿಗೆ ಕಚೇರಿಗೆ ಈ ವಿಷಯಗಳನ್ನೆಲ್ಲಾ ತಿಳಿಸಲ್ಪಟ್ಟಿದೆ.

★

ಪಾಕಿಸ್ತಾನ ಪ್ರತಿಭಟನೆ ಲೆಕ್ಕಿಸಿಲ್ಲ

ನವದೆಹಲಿ— ಕಾಶ್ಮೀರದಲ್ಲಿ ಸರಕಾರ ಜಾರಿಮಾಡಿರುವ ಕೇಂದ್ರ ಶಾಸನ ಬಗ್ಗೆ ಪಾಕಿಸ್ತಾನ ಮಾಡಿದ ಪ್ರತಿಭಟನೆಯನ್ನು ಭಾರತ ಸರಕಾರ ನಿರಾಕರಿಸಿದೆ.

Quality Printing — Neat Binding

Lakshminarasimha Press

Sivarampet, Mysore

Help The Gorakshana



ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚೆಚ್ಚಾಗಿ ನಡೆಯಲಿ

ಗೋರಕ್ಷಣೆಗೆ ಬೆಂಬಲ ನೀಡಿ

Protect the Cow

ಜಯಪ್ರದ 3ನೇ ವಾರ

ಪುಡ್‌ಲ್ಯಾಂಡ್ಸ್

— ಅತ್ಯಾಕರ್ಷಣೀಯ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ —

ಸಾಜನ್ SAAJAN

ನಟವರ್ಗ— ಮನೋಜ್‌ಕುಮಾರ್, ಆಶಾ ಪರಾಖ್, ಓಂ ಪ್ರಕಾಶ್
ಮದನಪುರಿ, ಶಬ್‌ನಮ್

ನಿರ್ದೇಶನ : ಮೋಹನ್ ಸೇಗಾಲ್ ಸಂಗೀತ : ಲಕ್ಷ್ಮೀಕಾಂತ ಪ್ಯಾರೇಲಾಲ್

[ದಿನ 3 ಪ್ರದರ್ಶನಗಳು]

ಅನೋಖಾ 3ನೇ ವಾರ

ಆಪೆರಾ—

.... ಚಿತ್ತಾಕರ್ಷಕ ಈಸ್ಟ್‌ಮ್ಯಾನ್ ಕಲರ್ ಹಿಂದಿ ಚಿತ್ರ ....

ಮಹಲ್

ನಾಯಕ— ದೇವಾನಂದ್, ಆಶಾ ಪರಾಖ್, ಅಭಿ ಭಟ್ಟಾಚಾರ್ಯ
ಡೇವಿಡ್, ಅಜಾ, ಸುಧೀರ್

ನಿರ್ದೇಶನ— ಶೇಖರ್ ಮುಖರ್ಜಿ ಸಂಗೀತ— ಕಲ್ಯಾಣ್‌ಜಿ ಆನಂದ್‌ಜಿ

ದಿನ 3 ಆಟಗಳು

Golden Jubilee of 'Satyavadi'

Sunday 28-9-1969

at 'Satyavadi' office Chamarajapuram, Mysore 4.

The President, the Prime Minister, H.H. the Maharaja of Mysore, and other personages have extended messages of felicitations and good wishes. Sri Sringeri and Sri Dwaraka Jagadgurujis have favoured blessings and financial aid.

Rajasabhā-bhushana Sri F. K. Irani, Sri M. B. Basaviah Sri Madhav Shenoi, Sri Opera Talkies, Padmabhushana Dr. M.C. Modi, Dr. R. S. Nanjunda Swamy (Glasgow) Sri Ananthanarasimhaiyengar (Honganur) have generously extended donations and best wishes.

It is well known that golden jubilee of newspapers in India is rare and almost unknown in Mysore State. The Prime Minister has expressed that it is no small achievement.

Hearty cooperation, extending of messages and donations and gracing the occasion with presence, are fervently solicited with grateful thanks.

SHAKTI SUDHA

A Superb Tonic

Edited, Printed & Published by Dharmaprachara Nirata M S Krishna Rao (Proprietor) at the Satyavadi Press Chamarajapuram, Mysore